ಋ) ಸದರಿ ಯೋಜನೆಯಡಿಯಲ್ಲಿ ಇನ್ನೂ ಆಯ್ಕೆ ಮಾಡಿಕೊಳ್ಳಬೇಕಾದ ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು:

ಋೂ) ಇವುಗಳಿಗೆ ವಿದ್ಯುತ್ ಸಂಪರ್ಕವನ್ನು ಯಾವಾಗ ಕಲ್ಪಿಸಿಕೊಡಲಾಗುವುದು:

ಎ) ಈ ತಾಲ್ಲೂಕು ವ್ಯಾಪ್ತಿಗೆ ವಿದ್ಯುತ್ ಸೌಲಭ್ಯವಿದ್ದರೂ ಸಹ ಇದುವರೆಗೂ ಕೆಲ ಗ್ರಾಮಗಳಿಗೆ ವಿದ್ಯುತ್ ಸಂಪರ್ಕದ ಸೌಲಭ್ಯ ಒದಗಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಸಾಗರ ವಿಧಾನ ಸಭಾ ಕ್ಷೇತ್ರದಲ್ಲಿ ಆರ್.ಇ.ಸಿ. ಯೋಜನೆಯಡಿಯಲ್ಲಿ ಒಟ್ಟು 267 ಮಜಿರೆ ಗ್ರಾಮಗಳ ವಿದ್ಯುದ್ದೀಕರಣ ಮಾಡುವ ಹಾಲಿ ಯೋಜನೆಯು ಪ್ರಗತಿಯಲ್ಲಿದೆ.

ಆ) ಸದರಿ ಯೋಜನೆಯು 2000–2001 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಸಾಗರ ತಾಲ್ಲೂಕಿನಲ್ಲಿ ಎಲ್ಲಾ ಗ್ರಾಮಗಳನ್ನು ವಿದ್ಯುದೀಕರಣಗೊಳಿಸಲಾಗಿದೆ.

ಈ) ಅನ್ವಯಿಸುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಸಾಗರ ವಿಧಾನ ಸಭಾ ಕ್ಷೇತ್ರದಲ್ಲಿ ಆರ್.ಇ.ಸಿ. ಯೋಜನೆಯಡಿಯಲ್ಲಿ ಒಟ್ಟು 267 ಮಜಿರೆ ಗ್ರಾಮಗಳನ್ನು ವಿದ್ಯುದೀಕರಣಗೊಳಿಸಲು ಅನುಮೋದಿಸಲಾಗಿದೆ. ಇವುಗಳು ಸಾಗರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ವಿಸ್ತರಿಸಿವೆ. ಇವುಗಳಲ್ಲಿ 232 ಮಜಿರೆ ಗ್ರಾಮಗಳ ಕೆಲಸವು ಪೂರ್ಣಗೊಂಡಿದ್ದು. 35 ಮಜಿರೆ ಗ್ರಾಮಗಳ ಕಾಮಗಾರಿಯು ಬಾಕಿ ಇರುತ್ತದೆ.

ಋ) ಇರುವುದಿಲ್ಲ

ಋೂ) ಅನ್ವಯಿಸುವುದಿಲ್ಲ.

ಎ) ಉಳಿದ 35 ಮಜಿರೆ ಗ್ರಾಮಗಳು ಅರಣ್ಯ ಪ್ರದೇಶದಲ್ಲಿ ಬರುವುದರಿಂದ ವಿಳಂಬವಾಗಿರುತ್ತದೆ.

53(867) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ಕಾರವು ಜೋಗ್ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದೆಯೇ;

ಆ) ಇದು ಎಂದಿನಿಂದ ಜಾರಿಗೆ ಬಂದಿದೆ;

ಇ) ಇದಕ್ಕೆ ನೀಡಿರುವ ಸವಲತ್ತುಗಳೇನು;

ಈ) ಜೋಗ್ ಅಭಿವೃದ್ಧಿ ಪ್ರಾಧಿಕಾರವು ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿದೆಯೇ;

ಉ) ಇದರ ಅಧ್ಯಕ್ಷರು ಯಾರು;

ಊ) ಸ್ಥಳೀಯ ಶಾಸಕರು ಇದರ ಅಧ್ಯಕ್ಷರಾಗಬೇಕಾಗಿರುವುದು ನಿಜವೇ, ಪ್ರಾಧಿಕಾರ ರಚನೆಗೊಂಡು ಇಲ್ಲಿಯವರೆಗೆ ಎಷ್ಟು ಸಭೆಗಳನ್ನು ನಡೆಸಿದೆ;

ಋ) ಇಲ್ಲದಿದ್ದಲ್ಲಿ ಸಭೆ ನಡೆಸದಿರಲು ಕಾರಣಗಳೇನು ಹಾಗೂ ಯಾವಾಗ ಸಭೆಯನ್ನು ನಡೆಸಲಾಗುವುದು;

ಋೂ) ಜೋಗ್ ಅಭಿವೃದ್ಧಿಗಾಗಿ ಸರ್ಕಾರ ಇದುವರೆಗೆ ಮಂಜೂರು ಮಾಡಿರುವ, ಬಿಡುಗಡೆಯಾಗಿರುವ ಮತ್ತು ಖರ್ಚು ಮಾಡಲಾಗಿರುವ ಹಣವೆಷ್ಟು;

ಎ) ಕಾಮಗಾರಿಗಳು ಯಾವ ಹಂತದಲ್ಲಿದೆ ಮತ್ತು ಯಾವಾಗ ಮುಗಿಸಲಾಗುವುದು,

ಏ) ಜೋಗವನ್ನು ಕೆ.ಆರ್.ಎಸ್. ಮಾದರಿಯಲ್ಲಿ ಅಭಿವೃದ್ಧಿಗೊಳಿಸುವ ಯೋಜನೆಗಳನ್ನು ರೂಪಿಸಲು ಪರಿಗಣಿಸಲಾಗುವುದೇ;

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಹೌದು

ಆ) 2ನೇ ಜನವರಿ 2002

ಇ) ಏನೂ ನೀಡಿಲ್ಲ

ಈ) ಹೌದು

ಉ) ಮಾನ್ಯ ಪ್ರವಾಸೋದ್ಯಮ ಸಚಿವರು

ಊ) ಇಲ್ಲ

ಇದುವರೆವಿಗೂ ಒಟ್ಟು 22 ಸರ್ವ ಸದಸ್ಯರ ಸಭೆ ನಡೆಸಿದೆ (ಉಪ ಸಮಿತಿ ಸಭೆಗಳು ಸೇರಿ)

ಋ) ಉದ್ಭವಿಸುವುದಿಲ್ಲ.

ೠ) 1. ಮಂಜೂರು ಮಾಡಿರುವ ಹಣ ರೂ.500.00 ಲಕ್ಷಗಳು

2. ಬಿಡುಗಡೆ ಮಾಡಿರುವ ಹಣ ರೂ. 234.00 ಲಕ್ಷ

3. ಇದೂವರೆಗೂ ಖರ್ಚು ಮಾಡಿರುವ ಹಣ ರೂ. 140.70 ಲಕ್ಷ

ಎ) 12 ಕಾಮಗಾರಿಗಳು ಪೂರ್ಣಗೊಂಡಿವೆ 2 ಕಾಮಗಾರಿಗಳನ್ನು ಜನವರಿ 2005ರ ಅಂತ್ಯಕ್ಕೆ ಮುಗಿಸಲಾಗುವುದು. ಒಂದು ಕಾಮಗಾರಿ ಟೆಂಡರ್ ಪ್ರಕ್ರೀಯೆಯಲ್ಲಿದೆ.

ಏ) ಹೌದು

54(314) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಮಸೀದಿಗಳ ದುರಸ್ಥಿಗೆ ಹಣವನ್ನು ಮಂಜೂರು ಮಾಡಲಾಗಿದೆಯೇ (ತಾಲ್ಲೂಕುವಾರು ವಿವರ ಒದಗಿಸುವುದು)?

ಆ) ಹಾಗಿದ್ದಲ್ಲಿ, ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್ (ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಹೌದು, ಪಟ್ಟಿ ಲಗತ್ತಿಸಿದೆ

ಆ) ರೂ. 4,20,000–00 (ನಾಲ್ಕು ಲಕ್ಷ ಇಪ್ಪತ್ತು ಸಾವಿರ ರೂ.ಗಳು ಮಾತ್ರ)

ANNEXURE TO L.A. QUESTION NO.314 (UNSTARED) RAISED BY SRI HALIAPPA,MLA. (H SAGAR)

Statement showing the details of Grants sanctioned to Mosques in Shimoga District. Taluk. wise

Sl. No.	Name of the Taluk	No. of Wakf Institutions.	Amount Sanctioned
	District Shimoga		
1.	Shimoga Taluk	06	Rs. 1,20,000.00
2.	Bhadravathi	03	Rs. 80,000.00